# ಎನ್‌ಐಟಿಕೆ ತಂಡದ ಸಾಧನೆ

**ಸಂ.ಕ.ಸಮಾಚಾರ, ಮಂಗಳೂರು**
ಎನ್‌ಐಟಿಕೆ ರೂರ್‌ಕೆಲಾದಲ್ಲಿ ನಡೆದ ಅಖಿಲ ಭಾರತ ಅಂತರ ಎನ್‌ಐಟಿ 2023–2024 ಕ್ರೀಡಾಕೂಟದಲ್ಲಿ ಎನ್‌ಐಟಿಕೆ ಕ್ರೀಡಾಪಟುಗಳು 16 ಪದಕಗಳನ್ನು ಗೆದ್ದಿದ್ದಾರೆ. ಎನ್‌ಐಟಿಕೆ ತಂಡವು 5 ಚಿನ್ನ, 7 ಬೆಳ್ಳಿ ಮತ್ತು 4 ಕಂಚು ಸೇರಿದಂತೆ ಒಟ್ಟು 16 ಪದಕಗಳನ್ನು ಗೆದ್ದಿದೆ. ಜ.26ರಿಂದ 28 ರವರೆಗೆ ನಡೆದ ಈ ಕಾರ್ಯಕ್ರಮದಲ್ಲಿ ಈಜು ಮತ್ತು ಟೆನಿಸ್‌ನಲ್ಲಿ ಎನ್‌ಐಟಿಕೆ ವಿದ್ಯಾರ್ಥಿಗಳ ಪ್ರತಿಭೆಯನ್ನು ಪ್ರದರ್ಶಿಸಲಾಯಿತು. ಈ ಹಿನ್ನೆಲೆ ನಿರ್ದೇಶಕ ಪ್ರೊ.ಬಿ.ರವಿ, ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್, ಎಸ್‌ಎಎಸ್ ಅಧಿಕಾರಿಗಳು ಮತ್ತುಎನ್‌ಐಟಿಕೆಯ ಇಡೀ ಸಮುದಾಯವು ವಿದ್ಯಾರ್ಥಿಗಳ ಸಾಧನೆಗೆ ಅಭಿನಂದನೆ ಸಲ್ಲಿಸಿದೆ.



Samyukta Karnataka, Date:01/02/24, p. no - 08